

# ರಾಷ್ಟ್ರಚೇತನ ಜಾಗ್ರತಗೊಳಿಸಿದ ವಿವೇಕಾನಂದರು

ಸಂಗನಾಳಮಠ ಯು.ಎನ್

*ಹೊನ್ನಾಳಿಯ ಸರ್ಕಾರಿ ಪದವಿಪೂರ್ವ ಕಾಲೇಜಿನಲ್ಲಿ ರಾಜ್ಯಶಾಸ್ತ್ರ ಉಪನ್ಯಾಸಕರಾಗಿರುವ ಶ್ರೀ ಸಂಗನಾಳಮಠ ಅವರು ವಿವೇಕಾನಂದರ ರಾಷ್ಟ್ರೀಯ ಚಿಂತನೆಯ ಕೆಲವು ಅಂಶಗಳನ್ನು ವಿವರಿಸಿರುವರು.*

ಸ್ವಾಮಿ ವಿವೇಕಾನಂದರು ಇನ್ನೂ ನರೇಂದ್ರನಾಗಿದ್ದಾಗ ತಂದೆ ವಿಶ್ವನಾಥದತ್ತರನ್ನು "ನನಗೆ ನಿಮ್ಮ ಮಾರ್ಗದರ್ಶನ ವೇನು?" ಎಂದು ಕೇಳಿದಾಗ "ಎಂದೂ ಆಶ್ಚರ್ಯಚಕಿತನಾಗ ಬೇಡ" ಎಂದು ಉತ್ತರಿಸಿದರಂತೆ. ಸ್ವಾಮೀಜಿ ಅದರಂತೆ ನಡೆದರು. ಜೀವನದ ವೈವಿಧ್ಯ ಮತ್ತು ವೈರುಧ್ಯಗಳನ್ನು ಕಂಡರು. ಒಂದೇ ದಿನದಲ್ಲಿ ಸನ್ಮಾನ-ತಿರಸ್ಕಾರ ಕಂಡರು. ಅವರಿಗೆ ಅದು ಜೀವನದ ಸಹಜ ಮುಖವಾಗಿ ಕಂಡಿತು. ಆಶ್ಚರ್ಯ ಗಾಬರಿ ಕೋಪ ಹೊಂದದೇ ಸಮಾಧಾನಿಯಾಗಿದ್ದರು. ಅವೆಲ್ಲ ಜಗನ್ಮಾತೆಯ ಲೀಲೆಯಾಗಿ ಕಂಡಿತು ಅವರಿಗೆ.

**ಒಂದು ಘಟನೆ :**

ಪಾಶ್ಚಾತ್ಯ ದೇಶಗಳಿಂದ ಸ್ವಾಮಿ ವಿವೇಕಾನಂದರು ತಾಯ್ನಾಡಿಗೆ ಮರಳಿದಾಗ ಕೆಲವು ಕಾಲೇಜು ವಿದ್ಯಾರ್ಥಿಗಳು ಭೇಟಿಗಾಗಿ ಬಂದಾಗ ಓರ್ವ ವಿದ್ಯಾರ್ಥಿ ಈ ರೀತಿ ಪ್ರಶ್ನಿಸಿದ: "ಸ್ವಾಮೀಜಿ ನೀವು ಕಾಷಾಯ ವಸ್ತ್ರಧಾರಿಗಳು. ಪ್ರಾಯಶಃ ಯಾವುದೇ ವಿಧದ ಸ್ವಾತಂತ್ರ್ಯ ಹೋರಾಟದಲ್ಲಿ ನೇರವಾಗಿ ಭಾಗಿಯಾಗಲು ಸಾಧ್ಯವಾಗಲಾರದು. ಆದರೂ ಈ ಹೋರಾಟ ಬೆಂಬಲಿಸಿ ಒಂದು ಹೇಳಿಕೆಯನ್ನು ನೀಡಿರಿ." ಆಗ ಸ್ವಾಮೀಜಿ, "ಸ್ವರಾಜ್ಯವನ್ನು ಜೀರ್ಣಿಸಿಕೊಳ್ಳಬಲ್ಲಂತಹ ಜನರೆಲ್ಲಿದ್ದಾರೆ? ಸ್ವರಾಜ್ಯ ಎಂದರೆ ಹೊಣೆಗಾರಿಕೆ ಎಂಬುದು ನಿಮಗರಿವಿದೆಯೇ" ಎಂದು ಮರುಪ್ರಶ್ನಿಸಿದರು.

ನೂರಾರು ವರ್ಷಗಳ ಗುಲಾಮಗಿರಿಯಿಂದ, ಭ್ರಷ್ಟ ಸಂಸ್ಕೃತಿ ಸಂಸ್ಕಾರದಿಂದ ಒಡಕು ತುಂಬಿರುವ ಹಿಂದೂ ಸಮಾಜದಲ್ಲಿ ಗಳಿಸಿದ ಸ್ವರಾಜ್ಯವನ್ನು ಉಳಿಸಿಕೊಂಡು ಅನುಭವಿಸಿಕೊಂಡು ಹೋಗುವ ಯೋಗ್ಯತೆಯ ಅಭಾವ ಅವರನ್ನು ಕಾಡುತ್ತಿತ್ತು.

**ಸಂಘಟನೆ**

ಸ್ವಾತಂತ್ರ್ಯಗಳಿಕೆಯ ಮುನ್ನ ಯೋಗ್ಯವ್ಯಕ್ತಿಗಳ ನಿರ್ಮಾಣ ಮಾಡುವ ಯೋಜನೆ ಅವರದಾಗಿತ್ತು. ಇದಕ್ಕಾಗಿ ಎರಡು ಹಂತದ ಕಾರ್ಯಯೋಜನೆ ರೂಪಿಸಿದ್ದರು. ಮೊದಲನೆಯದಾಗಿ ದಾಸ್ಯದ ಕಾರಣವಾದ, ಹಿಂದೂ ಮಾನಸಿಕತೆಯಲ್ಲಿ ಆಳವಾಗಿದ್ದ ಆತ್ಮಹೀನತೆಯನ್ನು ತೊಡೆದುಹಾಕುವುದು. ಎರಡನೆಯದಾಗಿ ಧರ್ಮವನ್ನೇ ಕೇಂದ್ರವಾಗಿಟ್ಟುಕೊಂಡು ಒಂದು ಸಂಘಟನೆಯನ್ನು ಹುಟ್ಟುಹಾಕುವುದು. ಆ ಹೊತ್ತಿಗಾಗಲೇ ಸ್ವಾಮೀಜಿ ಹಿಂದೂ ಧರ್ಮದ ಶ್ರೇಷ್ಠತೆಯನ್ನು ಪಾಶ್ಚಾತ್ಯ ಭೂಮಿಯಲ್ಲಿ ಎತ್ತಿ ಹಿಡಿದಿದ್ದರು. ಈಗ ಹಿಂದೂಸಮಾಜವನ್ನು ಸಿದ್ಧಗೊಳಿಸುವ ಕಾರ್ಯವನ್ನು ಕೈಗೊಳ್ಳಲು ಸಿದ್ಧರಾದರು. ಈ ಸಮಾಜದಲ್ಲಿ ತುಂಬಿರುವ ವೈಷಮ್ಯ, ಮತ್ಸರ, ಮೂಢನಂಬಿಕೆ, ಮಡಿವಂತಿಕೆ, ಅಸ್ಪೃಶ್ಯತೆ ಇವುಗಳನ್ನು ಕಟುವಾದ ಭಾಷೆಯಲ್ಲಿ ಟೀಕಿಸಲು ಆರಂಭಿಸಿದರು. ಅವರು ಯುವಕರಿಗೆ ಹೀಗೆ ಕರೆ ನೀಡುತ್ತಾರೆ:

"ನಮ್ಮ ಈ ರಾಷ್ಟ್ರೀಯ ನೌಕೆಯು ಭವ್ಯ ಸಂಸ್ಕೃತಿಯನ್ನು ಹೊತ್ತು ಯುಗಯುಗಗಳಿಂದ ಸಂಚರಿಸುತ್ತಿದೆ. ತನ್ನ ಆ ಅಮೂಲ್ಯ ಸಂಪತ್ತಿನಿಂದ ಇಡೀ ಜಗತ್ತನ್ನು ಸಮೃದ್ಧಗೊಳಿಸುತ್ತ ಬಂದಿದೆ... ಆದರೆ ಇಂದು ಅದು ನಿಮ್ಮ ತಪ್ಪಿನಿಂದಲೋ ಅಥವಾ ಇನ್ನಾವ ಕಾರಣದಿಂದಲೋ ಒಡಕಾಗಿ ಹಾನಿಗೊಳಗಾಗಿರಬಹುದು. ಈ ಸ್ಥಿತಿಯಲ್ಲಿ ಅದರೊಳಗೆ ಇರುವ ನೀವು ಏನು ಮಾಡುವಿರಿ? ನಿಮ್ಮೊಳಗೆ ಕಚ್ಚಾಡುತ್ತ ಕೂಡುವಿರಾ? ಎಲ್ಲರೂ ಒಗ್ಗೂಡಿ ಆ ತೂತುಗಳನ್ನು ಮುಚ್ಚಲು ನಿಮ್ಮೆಲ್ಲ ಶಕ್ತಿ ಹಾಕುವುದಿಲ್ಲವೆ?... ಬನ್ನಿ ಈ ಕಾರ್ಯಕ್ಕಾಗಿ ನಮ್ಮ ಹೃದಯದ ಶಕ್ತಿಯನ್ನು ಬಸಿಯೋಣ.... ನಿಮ್ಮ ದೇಶದ ಹಿತ ಸಾಧಿಸುವ ಹಂಬಲ ನಿಮಗಿದ್ದಲ್ಲಿ ನಿಮ್ಮಲ್ಲಿ ಪ್ರತಿಯೊಬ್ಬನೂ ಓರ್ವ ಗುರುಗೋವಿಂದ ಸಿಂಹನಾಗಿರಬೇಕು. ಬನ್ನಿ! ನಮ್ಮಲ್ಲಿನ ಪರಸ್ಪರ ವೈರ ಮತ್ಸರಗಳನ್ನೂ ನೆಲದಾಳದಲ್ಲಿ ಹುಗಿಯೋಣ ಪ್ರೀತಿಯ ಪ್ರವಾಹವನ್ನು ಸರ್ವತ್ರ ಪ್ರವಹಿಸೋಣ."

ಹೀಗೆ ಹಿಂದೂ ಸಮಾಜವನ್ನು ಎಚ್ಚರಿಸಲು ಮೊದಲು ಆತ್ಮವಿಶ್ವಾಸವನ್ನು ಜಾಗೃತಗೊಳಿಸಿದರು. ನಂತರ ಕೊರತೆ-ದೋಷಗಳನ್ನು ಗುರುತಿಸಿ ಅವುಗಳನ್ನು ಜನತೆಗೆ ತಿಳಿಸಿದರು. ಅದಕ್ಕಾಗಿ ಸಮಾಜಸಂಘಟನೆ ಒಂದೇ ಮಾರ್ಗ ಎಂದರು. ಏಕೆಂದರೆ ಪಾಶ್ಚಾತ್ಯದೇಶಗಳಲ್ಲಿದ್ದಾಗ ಸ್ವಾಮೀಜಿಯವರು ಅಲ್ಲಿಯ ಸಾಮಾಜಿಕ ಸಂಘಟನೆಯಿಂದ ತುಂಬ ಪ್ರಭಾವಿತರಾಗಿದ್ದರು. ಹಿಂದೂಸಮಾಜದಲ್ಲಿನ ಅಸಂಘಟನೆಯೇ ಎಲ್ಲ ಸಾಮಾಜಿಕ ಸಮಸ್ಯೆಗಳಿಗೆ, ಗುಲಾಮಗಿರಿಗೆ ಕಾರಣ ಎಂದು ಮನವರಿಕೆಯಾಗಿತ್ತು. ಅದಕ್ಕೆ ಹೇಳಿದರು.

"ನಮ್ಮ ರಾಷ್ಟ್ರದ ಏಕಮೇವ ಸಮಾನ ಅಧಿಷ್ಠಾನ ಎಂದರೆ ನಮ್ಮ ಪರಂಪರೆ, ಧರ್ಮ. ಇಲ್ಲಿನ ಎಲ್ಲ ಪಂಥ ಉಪಪಂಥಗಳ ಸಿದ್ಧಾಂತಗಳು ವಿಧಾನಗಳು ಎಷ್ಟೇ ವಿಭಿನ್ನವಿರಲಿ ಅವೆಲ್ಲಕ್ಕೂ ಸಮಾನವಾದ ಕೆಲವು ಮೂಲತತ್ತ್ವಗಳು ನಮ್ಮ ಧರ್ಮದಲ್ಲಿವೆ... ಭಾರತದಲ್ಲಿರುವ ಭಾಷೆ, ಜಾತಿ ಈ ಎಲ್ಲ ವಾದಗಳು ಧರ್ಮದ ಏಕತೆಯ ಪ್ರಭಾವದಲ್ಲಿ ಕರಗಿಹೋಗುತ್ತವೆ.... ಭಾರತದಲ್ಲಿ ಧರ್ಮ ಸರ್ವೋಚ್ಚ ಆದರ್ಶವಷ್ಟೇ ಅಲ್ಲ, ಕಾರ್ಯದ ವಿಧಾನ. ಮೊದಲು ಇದನ್ನು ಬಲಿಷ್ಠಗೊಳಿಸಬೇಕು. ಈ ದೇಶದಲ್ಲಿನ ವಿವಿಧ ಸಂಪ್ರದಾಯಗಳಲ್ಲಿನ ಸಮನ್ವಯವೇ ಅದನ್ನು ಉಜ್ವಲ ಭವಿಷ್ಯದ ಶಿಖರಕ್ಕೇರಿಸಲು ಮೊದಲ

ಮೆಟ್ಟಿಲು. ಯುಗಯುಗಾಂತರಗಳ ನಮ್ಮ ರಾಷ್ಟ್ರ ಜೀವನರೂಪಿ ಮಹಾಶಿಲೆಯಲ್ಲಿ ಆ ಧಾರ್ಮಿಕ ಹಿತವೇ ನಾವು ಕಡೆಯಬೇಕಾಗಿರುವ ಮೊದಲ ಪಾವಟಿಗೆ."

ಧಾರ್ಮಿಕ ಭಾವನೆಗಳನ್ನು ಒಂದೆಡೆ ಕ್ರೋಢೀಕರಿಸುವ ಸಲುವಾಗಿ ಸಂಘಟನಾ ದೃಷ್ಟಿಯಿಂದ ದೇಶದಾದ್ಯಂತ 'ಓಂ' ದೇವಾಲಯಗಳನ್ನು ಆರಂಭಿಸಲು ಯೋಜಿಸಿದರು. 'ಓಂ' ಎಲ್ಲವನ್ನೂ ಒಳಗೊಂಡಿದೆ, ಅಂತೆಯೇ ಅದು ಹಿಂದೂಧ್ವನಿ ಎಂದಿದ್ದಾರೆ, ಸ್ವಾಮೀಜಿ.

ಈ ರೀತಿಯಾಗಿ ಆತ್ಮವಿಶ್ವಾಸದ ಜಾಗೃತಿ ಮೂಡಿಸಿ, ದೋಷ ಗುರುತಿಸಿ, 'ಓಂ'ಕಾರವನ್ನು ಕೇಂದ್ರವಾಗಿರಿಸಿಕೊಂಡು, ಭಾವನೆಗಳ ಏಕತೆಯನ್ನು ಸಾಧಿಸುವುದಲ್ಲದೆ, ಈ ಮೂಲಕ ಸಂಘಟನೆಯ ಬಲದೊಂದಿಗೆ ರಾಷ್ಟ್ರದ ಸ್ವಾತಂತ್ರ್ಯವನ್ನು ಪಡೆಯುವುದು ಅವರ ಯೋಜನೆಯಾಗಿತ್ತು.

**ಧರ್ಮಪ್ರಜ್ಞೆ**

"ನದಿ ಹೊಳೆ ಹಳ್ಳಗಳು ಎಲ್ಲೆಲ್ಲೋ ಹುಟ್ಟಿ ಎಲ್ಲೆಲ್ಲೋ ಹರಿದು ಒಂದೊಂದು ಹೆಸರು ಹೊಂದಿ ಕೊನೆಗೆ ಕಡಲನ್ನು ಸೇರುವಾಗ ಅವುಗಳ ಹೆಸರು ರೂಪಗಳೆರಡೂ ಹೊರಟು ಹೋಗಿರುತ್ತವೆ. ಹಾಗೆಯೇ ವಿಶ್ವದ ಎಲ್ಲ ಜಾತಿ ಮತ ಧರ್ಮಗಳು ಒಂದೊಂದು ಹೆಸರು ಪಡೆದು ಕೊನೆಗೆ ದೇವರೆಂಬ ಕಡಲಲ್ಲಿ ಸೇರಿದಾಗ ಅವುಗಳ ಹೆಸರು ಇರುವುದಿಲ್ಲ. .... ಸ್ವಧರ್ಮ ನಿಷ್ಠೆ, ಪರಧರ್ಮ ಸಹಿಷ್ಣುತೆಯನ್ನು ಜಗತ್ತಿಗೆ ತಿಳಿಸಿದ ದೇಶ ಭಾರತ. ಭಾರತೀಯ ಧರ್ಮ ಹೇಳುವುದೇನೆಂದರೆ —ನಿಮ್ಮ ನಿಮ್ಮ ಧರ್ಮವನ್ನು ಶ್ರದ್ಧೆಯಿಂದ ಆಚರಿಸಿ. ಅದರಲ್ಲೇ ಉತ್ತಮರೆನಿಸಿಕೊಳ್ಳುವುದರ ಜೊತೆ ಸರ್ವರ ಹೃದಯಗಳ ಆತ್ಮತತ್ತ್ವ ಅರಿಯಬೇಕು" ಎಂದಿದ್ದಾರೆ, ಸ್ವಾಮೀಜಿ.

ನಿಜವಾದ ಧರ್ಮ ಯಾವುದೆಂದು ಹೇಳಿ ಧರ್ಮಾಂಧರ ಕಣ್ಣು ತೆರೆಯಿಸಿದ ಸ್ವಾಮೀಜಿ ಧರ್ಮದ ಕುರಿತು ಭಾರತೀಯರ ಉದಾರ ಪ್ರಜ್ಞೆಯ ಬಗ್ಗೆ—"ರೋಮನ್ನರ ಕಾಟ ತಾಳದೇ ಓಡಿ ಬಂದ ಯಹೂದಿಗಳಿಗೆ ಆಶ್ರಯ ನೀಡಿದೆ ಭಾರತ. ಅರಬಸ್ತಾನದಿಂದ ಇಸ್ಲಾಂರ ಕಿರಿಕಿರಿ ಸಹಿಸದೆ ಬಂದ ಇರಾಣದ ಪಾರ್ಸಿಗಳಿಗೆ ಬಾಗಿಲು ತೆರೆದುದು ಭಾರತ. ಎಲ್ಲ ಧರ್ಮ ನಂಬಿಕೆಗಳೂ ಕೊನೆಗೊಮ್ಮೆ ಮನುಷ್ಯರನ್ನು ದೇವರ ಬಳಿಗೆ ಒಯ್ಯುತ್ತದೆ ಎಂಬುದನ್ನು ಸಾರಿ ಹೇಳಿದೆ ಭಾರತ. ಹಾಗೆಯೇ ಯಾವ ಮತ-ಧರ್ಮದವರೇ ಇರಲಿ ಎಲ್ಲರೂ ಒಂದಾಗಿ ಬಾಳುವುದೇ ವಿಶ್ವ ಮಾನವತೆಯ ಮೂಲಮಂತ್ರ ಎಂದು ವಿಶ್ವಕ್ಕೆ ತಿಳಿಸಿದ ನಾಡು ಭಾರತ" ಎಂದು ಹೇಳಿದ್ದಾರೆ.

**ಯುವಶಕ್ತಿ**

"ಏಳಿ ಎದ್ದೇಳಿ.... ಗುರಿಮುಟ್ಟುವವರೆಗೂ ನಿಲ್ಲಬೇಡಿ....." ಎಂದು ಭಾರತದ ಯುವಜನತೆಗೆ ಹೇಳಿದ ಈ ಮಹಾನ್ ಚೇತನ, "ದೇಶದ ಸ್ವಾತಂತ್ರ್ಯ ಮತ್ತು ಸರ್ವತೋಮುಖ ಉನ್ನತಿಗೆ ಕುದಿಯುವ ರಕ್ತದ ಉಕ್ಕಿನ ಸ್ನಾಯುಗಳುಳ್ಳ ಗಂಡೆದೆಯ ಯುವಜನ ಬೇಕು" ಎಂದು ಅಭಿಪ್ರಾಯಪಟ್ಟವರು. ವಿವೇಕಾನಂದರು ತಮ್ಮ ಸಂಘಟನಾ ಯೋಜನೆಗಳನ್ನು ಕಾರ್ಯರೂಪಕ್ಕೆ ತರುವಲ್ಲಿ ದೇಶದ ಯುವಪೀಳಿಗೆಯಲ್ಲಿ ಭರವಸೆಯನ್ನು ಹೊಂದಿದ್ದರು.

"ನನ್ನ ನಂಬಿಕೆ ತರುಣ ಪೀಳಿಗೆಯಲ್ಲಿದೆ. ಆಧುನಿಕ ಪೀಳಿಗೆಯಲ್ಲಿದೆ. ನನಗೆ ಬೇಕಾದ ಕಾರ್ಯಕರ್ತರು ಅದರಿಂದಲೇ ಎದ್ದು ಬಂದಾರು. ಈ ಎಲ್ಲ ಸಮಸ್ಯೆಗಳನ್ನೂ ಸಿಂಹಪರಾಕ್ರಮದಿಂದ ಎದುರಿಸಿಯಾರು. .. ನಮಗಿಂದು ಬುದ್ಧಿಶಾಲೀ ತೇಜಸ್ವೀ ಯುವಕರು ಬೇಕು" ಎಂಬ ಅಭಿಪ್ರಾಯವನ್ನು ಹೊಂದಿ ಯುವಕರಿಗೆ "ನಿಮಗಿಂದು ಯೌವನದ ಕೆಚ್ಚಿದೆ, ನಿಮ್ಮ ಭವಿಷ್ಯವನ್ನು ನಿರ್ಧರಿಸಲು ಇದೇ ಸಕಾಲ, ಮುದುಡಿ ಮುಪ್ಪಾದ ಮೇಲಲ್ಲ. ಯೌವನದ ನವಚೇತನವಿರುವಾಗಲೇ ನಿರ್ಧರಿಸಿ, ಕಾರ್ಯ ಮಾಡಲು ಇದೇ ಸರಿಯಾದ ಸಮಯ. ಹೊಸದಾಗಿ ಅರಳಿದ, ಯಾರೂ ಮುಟ್ಟದ ಮೂಸದ ಹೂಗಳನ್ನೆ ದೇವರಡಿಗೆ ಅರ್ಪಿಸಬೇಕು ಮತ್ತು ಅಂಥವನ್ನೇ ಅವನು ಸ್ವೀಕರಿಸುತ್ತಾನೆ. ಆದ್ದರಿಂದ ಬನ್ನಿ! ನಾವೊಂದು ಉಚ್ಚ ಧ್ಯೇಯವನ್ನು ಕೈಗೊಂಡು ಅದಕ್ಕಾಗಿ ಜೀವನ ಸರ್ವಸ್ವವನ್ನು ಸುರಿಯೋಣ. ಇದೇ ನಮ್ಮ ನಿರ್ಧಾರವಾಗಲಿ" ಎಂಬುದೇ ನಾಡಿನ ಯುವಕರಿಗೆ ಸ್ವಾಮೀಜಿಯವರು ನೀಡಿದ ಕರೆಯಾಗಿದೆ.

● ● ●

ಸರ್ವಸಂಗ ಪರಿತ್ಯಾಗಿಯಾದ ವಿವೇಕಾನಂದರು ಪ್ರಖರ ರಾಷ್ಟ್ರ ಪ್ರೇಮಿ. ಭಾರತದ ರಾಷ್ಟ್ರಪ್ರೇಮಿ ಸಂನ್ಯಾಸಿ ಎಂದು ವಿದೇಶಿಯರು ಅವರನ್ನು ಕರೆದರು. ಟಾಲ್‌ಸ್ಟಾಯ್ "ವಿವೇಕಾನಂದರ ಪುಸ್ತಕಗಳನ್ನು ಓದುವುದರಿಂದ ಮನಸ್ಸು ವಿಶಾಲವಾಗುತ್ತದೆ" ಎಂದಿದ್ದಾರೆ. ರವೀಂದ್ರರು "ಭಾರತವನ್ನು ತಿಳಿಯಬೇಕಾದರೆ ವಿವೇಕಾನಂದರನ್ನು ತಿಳಿಯಿರಿ" ಎಂದಿದ್ದಾರೆ. ಗಾಂಧೀಜಿ "ನಾನು ಸ್ವಾಮೀಜಿಯವರ ಎಲ್ಲ ಕೃತಿಗಳನ್ನೂ ಅಭ್ಯಸಿಸಿದ್ದೇನೆ. ಅದರಿಂದ ನನ್ನ ರಾಷ್ಟ್ರಪ್ರೇಮ ಸಾವಿರ ಪಾಲು ವೃದ್ಧಿಸಿದೆ" ಎಂದಿದ್ದಾರೆ. ನೆಹರೂ ಪ್ರಕಾರ, "ವಿವೇಕಾನಂದರು ಮಾನವತ್ವದ ಪ್ರತಿನಿಧಿ. ಆತ್ಮವಿಶ್ವಾಸದ ಪ್ರತೀಕ ; ಅವರಲ್ಲಿ ತೇಜೋಮಯ ಪ್ರಖರತೆಯ ಪರಾಕಾಷ್ಠತೆಯಿಂದ ಭಾರತವನ್ನು ಮುಂದಕ್ಕೆ ಒಯ್ಯುವ ಛಲವಿತ್ತು ; ಅಂದಿನ ದೀನ ದುರ್ಬಲ ಭಾವನೆಗಳಿಗೆ ಅವರು ಅಮೃತ ಸಿಂಚನೆ ಗೈದರು ಮತ್ತು ಗತೇತಿಹಾಸದ ಆಧಾರದಲ್ಲಿ ಆತ್ಮ ನಿರ್ಭರತೆಯನ್ನು ಕಲಿಸಿದರು."

ಸಿ.ರಾಜಗೋಪಾಲಚಾರಿಯವರ ಪ್ರಕಾರ "ವಿವೇಕಾನಂದರು ಹಿಂದೂಧರ್ಮವನ್ನು ರಕ್ಷಿಸಿದರು ಮತ್ತು ತನ್ಮೂಲಕ ಭಾರತವನ್ನೂ ರಕ್ಷಿಸಿದರು. ಅವರಿಲ್ಲದಿರುತ್ತಿದ್ದರೆ ನಮ್ಮ ಧರ್ಮ ನಷ್ಟವಾಗುತ್ತಿತ್ತು ಮತ್ತು ನಾವು ಸ್ವಾತಂತ್ರ್ಯವನ್ನೂ ಗಳಿಸುತ್ತಿರಲಿಲ್ಲ. ಆದ್ದರಿಂದ ಸ್ವಾಮೀಜಿಯವರಿಗೆ ನಾವೆಲ್ಲ ಅತ್ಯಂತ ಋಣಿಗಳಾಗಿರಬೇಕು."

**ವಿವೇಕಾನಂದರು ಭಾರತದ ಪ್ರಾಚೀನ ಪರಂಪರೆಯ ಪ್ರತಿನಿಧಿಗಳಾಗಿದ್ದರೂ, ಪಾಶ್ಚಾತ್ಯ-ಪೌರ್ವಾತ್ಯ ವಿಚಾರಗಳ ಸಂಪರ್ಕ ಕೊಂಡಿಯಾದರೂ, ಭಾರತದ ಅಂದು ಮತ್ತು ಇಂದುಗಳ ಸೇತುವೆಯಾದರು.**